ಶ್ರೀ ವಿ.ಎಂ. ಘಾಡಿ.—ಮೂರು ಕೆರೆಗಳ ಕೆಲಸವನ್ನು ನಿರ್ದಿಷ್ಟವಾಗಿ ಯಾವಾಗ ಮುಗಿಸಿ ನೀರು ಕೊಡುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಡಿಸೆಂಬರ್ ಅಂತರೊಳಗೆ ಪೂರ್ಣವಾಗಿ ಮುಗಿಸಿ ನೀರನ್ನು ಕೊಡುತ್ತೇವೆ.

ಶ್ರೀ ವಿ.ಎಂ. ಘಾಡಿ.—ನ್ಯಾಸರಗಿ ಕೆರೆಗೆ ಸಂಬಂಧಪಟ್ಟಂತೆ ಒಂದು ಸಮಸ್ಯೆ ಇದೆ. ಅರಣ್ಯ ಜಮೀನು ಇದೆ. ಇದಕ್ಕೆ ತಾವು ಏನೂ ಹೇಳಲಿಲ್ಲ. ಮತ್ತು ಅಂತರ ಡಿಸೆಂಬರ್ ಒಳಗೆ ಮೂರು ಕೆರೆಗಳನ್ನು ಅದಕ್ಕೆ ಸಂಬಂಧಪಟ್ಟ ನಾಲಾ ಕೆಲಸಗಳನ್ನು ಮುಗಿಸಿ ರೈತರಿಗೆ ನೀರು ಕೊಡುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಕೊಡುತ್ತೇವೆ.

Erecting of the statue of Late Sri Kengal Hanumanthaiah in front of Vidhana Soudha.

551. SRI H.L. THIMME GOWDA (Basavanagudi).—Will the Chief Minister be pleased to state.—

(a) the reasons for the delay in creating the statue of Late Sri Kengal Hanumanthaiah in front of Vidhana Soudha;

(b) when the Government proposes to install the said statue?

SRI R. GUNDU RAO (Chief Minister). —

(a) The question of eracting the statues of National Leaders around Vidhana Soudha with reference to the requests received from various organisation, etc., has been examined in detail and a decision has been taken to erect the statues of the following leaders.

(1) Mahatma Gandhi

(2) Pandit Jawaharlal Nehru

(3) Dr. Ambedkar

(4) Dr. M. Vishveswaraiah

(5) Sri Kengal Hanumanthaiah

Government had desired to erect the statue of late Dr. Ambedkar by the 14th April 1981 (i.e., the day of Ambedkar Jayanthi). Even though it was not possible to do so, owing to several constraints action is being taken in the matter on priority basis. As regards erection of the statues of other leaders, possible locations have been inspected and the matter is being finalised.

(b) Action will be taken as soon as possible.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಡಾಕ್ಟರ್ ಅಂಬೇಡ್ಕರ್ ಅವರ ಪ್ರತಿಮೆಯನ್ನು ಸರ್ಕಾರ ದವರು ಬಹಳ ಶೀಘ್ರವಾಗಿ ಮಾಡಿಸಿ ಅದನ್ನು ಅನಾವರಣ ಮಾಡುವ ಸ್ಥಿತಿಯಲ್ಲಿದ್ದಾರೆ. ಬಹಳ ಸಂತೋಷ. ಆ ಬಗ್ಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅದೇ ರೀತಿ ದಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಅನಾವರಣ ಮಾಡುವ ಬಗ್ಗೆ ಜಾಗ್ರತೆ ಮಾಡುತ್ತೇವೆಂದು ಹೇಳಿ ಆಶ್ವಾಸನೆ ಕೊಟ್ಟಿದ್ದರು ಆ ಬಗ್ಗೆಯೂ ಕೂಡ ಆದಷ್ಟು ಜಾಗ್ರತೆ ಮಾಡುತ್ತೀರಾ ಎಂದು ನಾನು ಪೂಜ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅದನ್ನೂ ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸರ್ಕಾರ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಆದಷ್ಟು ಜಾಗ್ರತೆ ಎಂದು ಹೇಳುತ್ತಾರೆ. ಸರ್ಕಾರ ಹೇಳತಕ್ಕದ್ದಕ್ಕೂ, ತಾವು ತಮ್ಮ ಬಾಯಿಂದ ಹೇಳುವುದಕ್ಕೂ ವ್ಯತ್ಯಾಸ ಇದೆ.

ಶ್ರೀ ಆರ್. ಗುಂಡೂರಾವ್.—ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆಂದು ಹೇಳಿಲ್ಲ. ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಡಾ. ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡತಕ್ಕದ್ದು ನಾನು ಮೆಚ್ಚುತ್ತೇನೆ. ಅದೇ ರೀತಿ ಪೂಜ್ಯ ಮಹಾತ್ಮಾ ಗಾಂಧಿಯವರು ನಮಗೆ ಸ್ವಾತಂತ್ರ್ಯ ತಂದಂ ಕೊಟ್ಟ ವ್ಯಕ್ತಿ. ಅವರ ಪ್ರತಿಮೆಯನ್ನು ವಿಧಾನ ಸೌಧದ ಮುಂದೆ ಇಡತಕ್ಕದ್ದು ಸೂಕ್ತ. ಹಾಗೆ ಪಂಡಿತ್ ಜವಹರ್‌ಲಾಲ್ ನೆಹರು ರಾಷ್ಟ್ರ ನಾಯಕರಾಗಿದ್ದರು. ಇನ್ನು ವಿಶ್ವೇಶ್ವರಯ್ಯನವರು ಇಡೀ ವಿಶ್ವದಲ್ಲಿಯೇ ಖ್ಯಾತಿಯನ್ನುಗಳಿಸಿದಂಥ ಮಹಾನ್ ವ್ಯಕ್ತಿ. ನಾವೆಲ್ಲರೂ ಕುಳಿತಿರತಕ್ಕ ವಿಧಾನ ಸೌಧದ ಕಾರ್ಯಕರ್ತರ ಪ್ರತಿಮೆಯನ್ನು ಬಹಳಷ್ಟು ಆಸಕ್ತಿ ವಹಿಸಿ ಈ ಡಿಸೆಂಬರ್ ತಿಂಗಳ ಒಳಗೆ ಅನಾವರಣ ಮಾಡಲಿಕ್ಕೆ ಸಾಧ್ಯವೇ ?

ಶ್ರೀ ಆರ್. ಗುಂಡೂರಾವ್.—ಈಗಾಗಲೇ ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಪಿ.ಎನ್. ರೆಡ್ಡಿ.—ಶ್ರೀ ಕೆಂಗಲ್ ಹನುಮಂತಯ್ಯನವರ ಮೊದಲ ವರ್ಷದ ಪುಣ್ಯ ತಿಥಿಯೊಳಗೆ ಪ್ರತಿಮೆಯನ್ನು ಅನಾವರಣ ಮಾಡಲಿಕ್ಕೆ ಸಾಧ್ಯವೆ?

ಶ್ರೀ ಆರ್. ಗುಂಡೂರಾವ್.—ಅಷ್ಟರೊಳಗೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಸತ್ಪುರುಷರಾದಂಥ ಬಸವೇಶ್ವರ ಪ್ರತಿಮೆಯನ್ನು ಅನಾವರಣ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ಪ್ರತಿಮೆಗಳನ್ನು ಅನಾವರಣ ಮಾಡತಕ್ಕದ್ದು ನಾನು ಸ್ವಾಗತ ಮಾಡುತ್ತೇನೆ. ನಮ್ಮ ಪಕ್ಕದ ರಾಜ್ಯದಲ್ಲಿ ನೋಡಿದರೆ, ನಾಡಿಗೋಸ್ಕರ, ದೇಶಕ್ಕೋಸ್ಕರ ದುಡಿದಂಥ ವರ ಪ್ರತಿಮೆಗಳಿವೆ. ನಮ್ಮಲ್ಲಿ ಕೆಂಗಲ್ ಹನುಮಂತಯ್ಯನವರ ಡಬಲ್ ರೋಡ್ ಇದೆ. ಇಪ್ಪೊತ್ತು ಮಹಾತ್ಮಾಗಾಂಧಿ ರಸ್ತೆ ಇದೆ ಅಲ್ಲಿ ಅವರ ಪ್ರತಿಮೆ ಮಾಡಿಸುತ್ತೀರಾ ?

ಅಧ್ಯಕ್ಷರು.—ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಅವರ ಪ್ರತಿಮೆ ಅಲ್ಲಿ ಇಲ್ಲವೆ.

Extension Traveller's Bungalow Building in Hassan Town

873. SRI K.H. HANUME GOWDA (Hassan). —Will the Minister for Public Works be pleased to state.—

(a) whether it has come to the notice of Government that difficulties are being experienced due to shortage of accommodation at the Travellers' Bungalow of Hassan Town;

(b) whether plan and estimates have been prepared for extension of the Travellers' Bungalow to solve the accommodation problem;

(c) when the Government would commence the work of extension of the Travellers' Bungalow?